ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 23.09.2024.
**ಪಾಟೀ ಸವಾಲುಃ** ಎದುರುದಾರ ಪರ ಶ್ರೀ ಆರ್.ಜೆ.ಪಿ. ವಕೀಲರಿಂದಃ

ಎದುರುದಾರರ ನನ್ನ ಸೊಸೆ ಮತ್ತು ಮೊಮ್ಮಕ್ಕಳು ಆಗಬೇಕು. ಅವರೆಲ್ಲ 3ನೇ ಎದುರುದಾರರ ತವರು ಮನೆಯಲ್ಲಿ ಇರುತ್ತಾರೆ. ಎದುರುದಾರರಿಗೆ ಯಾವುದೇ ರೀತಿ ಜೀವನಾಂಶ ಕೊಟ್ಟಿಲ್ಲ, ಏಕೆಂದರೆ ನಾವು ಕರೆಯಲು ಹೋಗಿರುತ್ತೇವೆ  ಅವರ ಬಂದಿರುವುದಿಲ್ಲ. ನಾಗೇಂದ್ರ ನನ್ನ ಮಗ ಇರುತ್ತಾನೆ. ಆತ ಖಾಸಗಿ ಚಾಲಕನಾಗಿರುತ್ತಾನೆ. ಅರ್ಜಿದಾರನ ಸ್ವತಃ ಕಾರು ಇರುತ್ತದೆ ಎಂದರೆ ಸರಿಯಲ್ಲ. ಈ ದಿನ

ನಾವು ನ್ಯಾಯಾಲಯಕ್ಕೆ ಕಾರಿನಲ್ಲಿಯೇ ಬಂದಿರುತ್ತೇವೆ ಎಂದರೆ ಸರಿಯಲ್ಲ. ನಾವು ಬಸ್‌ಗೆ ಬಂದಿರುತ್ತೇವೆ. ಅರ್ಜಿದಾರ ನನ್ನ ಮನೆಯಲ್ಲಿಯೇ ಇರುತ್ತಾನೆ. ನಾನು ಮತ್ತು ಅರ್ಜಿದಾರ ಒಂದೇ ಮನೆಯಲ್ಲಿ ಕೂಡಿಯೇ ಇರುತ್ತೇವೆ. ಎದುರುದಾರರು ನಮ್ಮ ವಿರುದ್ಧ ನಿಪಿ-1ರಂತೆ ದಾವೆ ಸಲ್ಲಿಸಿ 4-5 ವರ್ಷಗಳು ಆಗಿರುತ್ತವೆ, ಆದರೆ ನಮಗೆ ಈಗ ಗೊತ್ತಾಗಿರುತ್ತದೆ. ಸದರಿ 4-5 ವರ್ಷಗಳಲ್ಲಿ ನ್ಯಾಯಾಲಯದಿಂದ ನಮಗೆ ಯಾವುದೇ ರೀತಿ ಸಮನ್ಸ್, ನೋಟೀಸ್‌ಗಳು ಬಂದಿರುವುದಿಲ್ಲ.

ಈ ಕೇಸ್ ನಡೆದ ಬಗ್ಗೆ ನನಗೆ ಗೊತ್ತಾಗಿ 2-3ಗ ತಿಂಗಳ ಆಗಿರುತ್ತವೆ. ನ್ಯಾಯಾಲಯದಿಂದ ಅಧಿಕಾರಿಗಳು ಸಮನ್ಸ್ ತೆಗೆದುಕೊಂಡು ನಮ್ಮ ಊರಿಗೆ ಬಂದಿದ್ದರು ಎಂದರೆ ಸರಿಯಲ್ಲ. ಆಗ ನಾನು ಅರ್ಜಿದಾರ ಕಲಬುರಗಿಗೆ ಹೋಗಿರುತ್ತಾನೆ ಎಂದು ನ್ಯಾಯಾಲಯದ ಅಧಿಕಾರಿಗಳಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ತದನಂತರ ನ್ಯಾಯಾಲಯದಿಂದ ದಿಃ 03.11.2018 ರಂದು ನಮ್ಮ ಊರಿಗೆ ಕೋರ್ಟ್ ನೋಟೀಸ್ ತೆಗೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ನಂತರ ಅರ್ಜಿದಾರ ಕಲಬುರಗಿಯಿಂದ ಬಂದ ನಂತರ ನ್ಯಾಯಾಲಯದಿಂದ ನೋಟೀಸ್ ತೆಗೆದುಕೊಂಡು ಬಂದಿದ್ದರಿಂದ ಎಂದು ಆತನಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದ ನಂತರ ಅರ್ಜಿದಾರ ನ್ಯಾಯಾಲಯಕ್ಕೆ ಬಂದು ನೋಟೀಸಸ್ ತೆಗೆದುಕೊಂಡು ಹೇಗಿರುತ್ತಾರೆ ಎಂದರೆ ಸರಿಯಲ್ಲ.

ನಂತರ ಎದುರುದಾರರು ನ್ಯಾಯಾಲಯದಲ್ಲಿ ಅಮಲು ಬಜಾವಣೆ ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ದಾವಾ ಸ್ವತ್ತುಗಳ ಕಬ್ಜಾ ಕೂಡಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕಬ್ಜಾ ತೆಗೆದುಕೊಂಡ ನಂತರ ಸದರಿ ಇ.ಪಿ. ತೃಪ್ತಿಕರವಾಗಿದೆ ಎಂದು ಮುಕ್ತಾಯಗೊಳಿಸಲಾಗಿದೆ ಎಂದರೆ ಸರಿಯಲ್ಲ. ಸದ್ಯ ಎದುರುದಾರರು ಸದರಿ ಜಮೀನುಗಳ ಕಬ್ಜೆ ಪಡೆದುಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ಹೇಗಾದರು ಮಾಡಿ ಎದುರುದಾರರಿಂದ ಕಬ್ಜೆ ವಾಪಸ್ ಪಡೆದುಕೊಳ್ಳುವ ಉದ್ದೇಶದಿಂದ, ನನ್ನ ಮಗ ಮುಖಾಂತರ ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇವೆ ಎಂದರೆ

ಸರಿಯಲ್ಲ. ನ್ಯಾಯಾಲಯದಿಂದ ಯಾವುದೇ ನೋಟೀಸ್ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಸಹಾಯ ಮಾಡುವ ಉದ್ದೇಶದಿಂದ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**